ಸೀರೆಯ ಜೊತೆ ಇನ್ನೊಂದು ಸೀರೆಯನ್ನು ಹೊಟ್ಟೆಗೆ ಬಿಗಿಯಾಗಿ ಸುತ್ತಿಕೊಳ್ಳಲು ಶುರು ಮಾಡಿದಳು. ಪುರುಷೋತ್ತಮ ತನ್ನನ್ನು ಹೀಗೆಲ್ಲ ನೋಡಿದರೆ ಎಷ್ಟು ಅಸಹ್ಯಪಟ್ಟಿಕೊಂಡಾನು ಎಂಬ ಆತಂಕವೇ ಜಾಸ್ತಿಯಾಗಿತ್ತು ಶಾರಿಗೆ.

ಮದುವೆ ಆಗುತ್ತಲೇ ಅಂದ ಚೆಂದದ ವ್ಯಾಖ್ಯಾನವೆಲ್ಲ ಗಂಡನ ಕಣ್ಣಿಗೆ ತಕ್ಕಂತೆ ಬದಲಾಗತೊಡಗುತ್ತದೆ. ಅಪೇಕ್ಷೆ, ನಿರೀಕ್ಷೆಗಳೂ ಹಾಗೆಯೇ, ಅವನಿಗೆ ಚೆಂದವೆನಿಸಿದ್ದೇ ತಮಗೂ ಸರಿ ಎನ್ನಿಸುತ್ತದೆ. ಪುರುಷೋತ್ತಮನ ಕಣ್ಣುಗಳ ಮೂಲಕವೇ ಜಗತ್ತು ಕಾಣಿಸುತ್ತಿತ್ತು ಶಾರಿಗೆ. ಅಂಥದ್ದರಲ್ಲಿ ಬಾಳಂತನ ಸರಿಯಾಗದೇ ಕಾಯಿ ಹೊಟ್ಟೆಬಿದ್ದು ಐದಾರು ತಿಂಗಳ ಬಸುರಿಯಂತೆ ಕಂಡರೆ ಅವನಿಗೆಲ್ಲಿ ತನ್ನ ಮೇಲೆ ತಾತ್ಸಾರ ಬರುವುದೋ ಎಂಬ ಭಯ.

ಪುರುಷೋತ್ತಮ, 'ಸ್ವಲ್ಪ ವ್ಯಾಯಾಮ ಮಾಡು, ಬಗ್ಗಿ ನಿಗುರಿ ಮಾಡು ಹೊಟ್ಟೆ ಇಳಿದು, ಕಜ್ಜಿಯಂತಹ ಕಲೆಯೂ ಹೋಗಬಹುದು' ಎಂಬ ಸಲಹೆಯೊಂದಿಗೆ ಒಂದಿಷ್ಟು ವಾರಪತ್ರಿಕೆಯಲ್ಲಿ ಚೆಂದದ ಸಪಾಟು ಹೊಟ್ಟೆಯ ಸುಂದರಿಯರು ಹೊಟ್ಟೆಯ ಮೇಲಾದ ಕಲೆಯನ್ನು ತೆಗೆಯಲು ಹೇಳಿದ ಮುಲಾಮುಗಳನ್ನೆಲ್ಲ ಪುರುಷೋತ್ತಮ ತಂದುಕೊಟ್ಟಿದ್ದ.

ಬಾಣಂತನ ಮುಗಿದು ಎರಡು ವರ್ಷ ಕಳೆದರೂ ಕಾಯಿಹೊಟ್ಟೆ ಹಾಗೆಯೇ ಇತ್ತು. ಜೊತೆಗೆ ಗೆರೆಗಳೂ ಕೂಡ... 'ಎರಡನೇಯದನ್ನು ಹಡೆದಾಗ ಮೊದಲ ದಿನದಿಂದಲೇ ಅರಿವೆಯನ್ನು ಬಿಗಿಯಾಗಿ ಸುತ್ತು, ಕಾಯಿ ಹೊಟ್ಟೆ ಆಗಲಾದರೂ ಹೋಗಬಹುದು. ಈ ಸಲ ಯಾವ ಮುಲಾಮೂ ಹಚ್ಚುವುದು ಬೇಡ, ಬಾದಾಮೆಣ್ಣೆ, ಎಳ್ಳೆಣ್ಣೆ ಹಚ್ಚು ಹೊಟ್ಟೆಗೆ. ಕಲೆ ಹೋಗದಿದ್ದರೆ ಕೇಳು' ಎಂದು ಹೊಟ್ಟೆ ಬಗ್ಗೆ ಹಳಹಳಿಸಿದಾಗ ಹಲವರು ಸಲಹೆ ನೀಡಿದ್ದರು. ಹೊಟ್ಟೆಯನ್ನು ಕರಗಿಸಲಾದರೂ ಎರಡನೆಯದನ್ನು ಹಡೆಯುವ ಅನಿವಾರ್ಯತೆ ಶಾರಿಗೆ.

ಶಾರಿಗೆ ಏಳು ತಿಂಗಳು ತುಂಬಿದರೂ ಅಕ್ಕಪಕ್ಕದ ಮನೆಯವರಿಗೆ ಶಾರಿಯ ಬಸಿರೇ ತಿಳಿದಿರಲಿಲ್ಲ. ಹೊಟ್ಟೆಯೇ ಹಾಗಿತ್ತಲ್ಲವೇ!

ಎರಡನೇಯದನ್ನು ಹಡೆದು, ಎಷ್ಟೇ ಬಿಪ್ಪರಲಾಗ ಹಾಕಿದರೂ ಹೊಟ್ಟೆಯ ಮೇಲಿನ ಬರೆ ಹಾಗೂ, ಬಸುರಿಯಂತಹ ಹೊಟ್ಟೆ ಹೋಗಲೇ ಇಲ್ಲ.

ಇತ್ತ ಪುರುಷೋತ್ತಮನೂ ಪ್ರೀತಿಯಿಂದ ಹಂಗಿಸುತ್ತಿದ್ದನೋ ಇಲ್ಲಾ ಮನಸ್ಸಿನಲ್ಲಿದ್ದಿದನ್ನೇ ಹೊರಹಾಕುತ್ತಿದ್ದನೋ ಯಾರಿಗೆ ಗೊತ್ತು. 'ನಿನ್ನ ಡೊಳ್ಳಿನಂತಹ ಹೊಟ್ಟೆ ಕಂಡರೆ ಭಯಂಕರ ಹೆದರಿಕೆ ನನಗೆ, ಚರ್ಮ ರೋಗ ಬಂದವರಂತೆ ಕಾಣಿಸುತ್ತದೆ' ಎನ್ನುತ್ತಿದ್ದ. ಹಬ್ಬ ಹರಿದಿನ ಎಂದು ದೇವರ ಮುಂದೆ ಕುಳ್ಳಲು ಸೀರೆ ಉಡಲು ಶಾರಿ ಕೈ ಹಚ್ಚಿದರೆ ಸಾಕು, 'ಮಾರಾಯ್ತಿ ಚೂಡಿದಾರ ಹಾಕ್ಕೊಳ್ಳೆ. ನಿನ್ನ ಹೊಟ್ಟೆ ಕಂಡರೆ ನನಗೆ ಕಲಿತ ಮಂತ್ರವೂ ಬಾಯಿಗೆ ಬರದು.'

ಇಂಥದ್ದೆಲ್ಲ ಕೇಳಿ ಕಿವಿ ಹಿತ್ತಾಳೆಯಾದರೂ ಶಾರಿಗೆ ಮನಸ್ಸಿನ ಮೂಲೆಯಲ್ಲಿ ಒಂದಿಷ್ಟು ಆತಂಕ. ಗಂಡನ ಬಳಿ ಸುಳಿಯಲಿಕ್ಕೂ ಅವಳಿಗೆ ಒಂದು ನಮೂನೆಯಾದರೂ ಗಂಡ ತನ್ನಿಂದ ದೂರವಾದರೆ ಎನ್ನುವ ಸಂಶಯ. ಶಾರಿಯ ಸಂಕಟ ಅತ್ತಲಾಗೆ ಯಾರಬಳಿಯೂ ಹೇಳುವಂತೆಯೂ ಇಲ್ಲ, ಮನಸ್ಸಲ್ಲೇ ಇಟ್ಟುಕೊಂಡು ನೆಮ್ಮದಿಯ ಬದುಕು ಬದುಕುವಂತೆಯೂ ಇಲ್ಲ.

ಒಂದು ದಿನ ಹಾಗೆಯೇ ಪುರುಷೋತ್ತಮನ ತಾಯಿ ಯಾವತ್ತೂ ಬರದವಳು ಮಗನ ಮನೆಯ ಅನ್ನದ ಬಣ್ಣ ಕಾಣಲು ಬಂದಿದ್ದಳು. ಇಲ್ಲದಿದ್ದರೆ ಹಬ್ಬ ಹರಿದಿನ ಅಂತ ಊರ ಮೇಲೆ ಅಲೆಯುವವರಿಗೆ ಮಗ–ಮೊಮ್ಮಕ್ಕಳೆಲ್ಲ ಬೇಕಂತಲೇ ಇಲ್ಲ.

ಶಾರಿಗೆ ಅತ್ತೆಯ ಮೇಲೆ ಹೇಳಿಕೊಳ್ಳುವಂತಹ ದ್ವೇಷವಾಗಲಿ, ಪ್ರೀತಿಯಾಗಲಿ ಇಲ್ಲದ್ದರಿಂದ